ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೮**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಾರನೇ ಅಧಿವೇಶನ

## ಗುರುವಾರ, ದಿನಾಂಕ: ೨೧ನೇ ಆಗಸ್ಟ್ , ೨೦೨೫

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ರಾಜ್ಯದಲ್ಲಿನ ನೇಮಕಾತಿ ಪ್ರಾಧಿಕಾರಿಗಳ ವಿಭಿನ್ನ ನಿಯಮಗಳ ಅನುಸಾರ ನೇಮಕಾತಿ ಮಾಡಲು ಅವಕಾಶ ಮಾಡಿಕೊಟ್ಟಿರುವುದರಿಂದ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆಗುತ್ತಿರುವ ಅನ್ಯಾಯದ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೧೦೬ (೧೨೧೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನೇಮಕಾತಿ ಪ್ರಾಧಿಕಾರಗಳಾದ ಕೆ.ಪಿ.ಎಸ್.ಸಿ., ಕೆ.ಇ.ಎ., ಕೆ.ಎಸ್.ಪಿ., ಹಾಗೂ ಇತರೆ ಪ್ರಾಧಿಕಾರಗಳು ನೇಮಕಾತಿಯಲ್ಲಿ ೩೭೧(ಜೆ)ಗೆ ಸಂಬಂಧಿಸಿದ ಸರ್ಕಾರದ ಸುತ್ತೋಲೆಗಳಂತೆ ನೇಮಕಾತಿ ಮಾಡದೆ ಮನಸ್ಸಿಗೆ ಬಂದಂತೆ ವಿಭಿನ್ನ ನಿಯಮಗಳಂತೆ ನೇಮಕಾತಿ ಮಾಡಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಕೆ.ಪಿ.ಎಸ್.ಸಿ., ಯು ಕಲ್ಯಾಣ ಕರ್ನಾಟಕ ಹಾಗೂ ಉಳಿಕೆ ಮೂಲವೃಂದದ ಹುದ್ದೆಗಳಿಗೆ ಪ್ರತ್ಯೇಕವಾಗಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ ನೇಮಕಾತಿ ಮಾಡಿಕೊಳ್ಳುತ್ತಿದೆ. ಆದರೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಮಾತ್ರ ಕಲ್ಯಾಣ ಕರ್ನಾಟಕ ಹಾಗೂ ಉಳಿಕೆ ಮೂಲ ವೃಂದದ ಹುದ್ದೆಗಳಿಗೆ ಪ್ರತ್ಯೇಕವಾಗಿ ನೇಮಕಾತಿ ಹೊರಡಿಸದೇ ಒಂದೇ ಅಧಿಸೂಚನೆಯನ್ನು ಹೊರಡಿಸಿ ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಬಗ್ಗೆ ನಿಯಮ ಉಲ್ಲಂಘಿಸಿದ ಅಧಿಕಾರಿಗಳ ಮೇಲೆ ಇಲಾಖೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ಈ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಈಗಾಗಲೇ ನಡೆಸಿರುವ ಎಲ್ಲಾ ಹುದ್ದೆಗಳ ನೇಮಕಾತಿಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದ್ದು ಇದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಹಲವಾರು ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳಿಗೆ ಕೋರ್ಟ್‌ನಲ್ಲಿ ಪ್ರಕರಣಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿವೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ತೆಗೆದುಕೊಳ್ಳಲಾಗುವುದು ;

(ಉ) ಇದೊಂದು ಗಂಭೀರ ವಿಷಯವಾಗಿರುವುದರಿಂದ ಈ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಈಗಾಗಲೇ ಮಾಡಿರುವ ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ನೇಮಕಾತಿಗಳನ್ನು ರದ್ದುಗೊಳಿಸಿ ಮರುನೇಮಕಾತಿ ಮಾಡುವಂತೆ ಮಾಡಲು ಇಲಾಖೆ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ ; ಇಲಾಖೆ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಕೋರ್ಟ್ ಮೊರೆ ಹೋಗಲು ಅವಕಾಶ ಮಾಡಿಕೊಟ್ಟಂತಾಗುತ್ತದೆಯಲ್ಲವೇ ? (ಈ ಬಗ್ಗೆ ಸರ್ಕಾರದ ಸೂಕ್ತ ನಿಲುವನ್ನು ತಿಳಿಸುವುದು)

## ಕೆರೆಗಳ ಅಭಿವೃದ್ಧಿ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು)** –

೧೦೭ (೧೧೩೯) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಮತ್ತು ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳು ಮತ್ತು ಕಟ್ಟೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳೇನು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಶಿವಮೊಗ್ಗ ಜಿಲ್ಲೆಯಲ್ಲಿ ಮೂಲ ರೂಪ ಕಳೆದುಕೊಂಡ ಕೆರೆಗಳ ಮತ್ತು ಕಟ್ಟೆಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಬೆಂಗಳೂರು ನಗರದ ಸ್ವಚ್ಛತೆ/ಕಸ ವಿಲೇವಾರಿ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೮ (೧೨೩೪+೧೯೭೨) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಮ್ಮ ದೇಶದಲ್ಲಿ ಬೆಂಗಳೂರು ಮಹಾನಗರ ಸ್ವಚ್ಛತೆಯನ್ನು ಕಾಪಾಡುವಲ್ಲಿ ೩೭ನೇ ಸ್ಥಾನ ಪಡೆದಿರುವುದು ನಿಜವೇ ; ನಮ್ಮ ಬೆಂಗಳೂರು ಉದ್ಯಾನವನಗಳ ನಗರ, ಕೆರೆಗಳ ಬೀಡು, ನಿವೃತ್ತದಾರರ ಸ್ವರ್ಗ, ಸಿಲಿಕಾನ್ ವ್ಯಾಲಿ ಎಂಬ ಹೆಗ್ಗಳಿಕೆ ಪಡೆದಿದ್ದರೂ ಸ್ವಚ್ಛತೆಯಲ್ಲಿ ಹಿಂದುಳಿಯಲು ಕಾರಣಗಳೇನು ;

(ಆ) ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯ ವಿಲೇವಾರಿ ಸರ್ಕಾರ ಕೈಗೊಂಡಿರುವ ಕಾರ್ಯಗಳು ಪ್ರಗತಿಯನ್ನು ಸಾಧಿಸಲು ವಿಫಲವಾಗಲು ಕಾರಣಗಳೇನು ; ಹಸಿ ತ್ಯಾಜ್ಯ ಆಚೆ ವಿಲೇವಾರಿಯಲ್ಲಿ ಬಹಳಷ್ಟು ಬಾರಿ ಕಸವು ಕೊಳೆತು ನಾರುವ ಸ್ಥಿತಿ ಮುಟ್ಟಿರುತ್ತದೆ. ಕಂಪೋಸರ್ ಬಳಕೆಯ ನಂತರದ ನೈರ್ಮಲ್ಯಕ್ಕೆ ಕಾರಣವಾಗಿದೆ , ಪರಿಹಾರ ಮಾರ್ಗಗಳೇನು, ಕಸ ವಿಲೇವಾರಿ ಮಾಡುವ ಬಗ್ಗೆ ಚಿಂತಿಸದಿರಲು ಕಾರಣವೇನು ;

(ಇ) ಕಸ ಸಂಗ್ರಹದ ಹಣವನ್ನು ಸರ್ಕಾರ ಎಷ್ಟು ಶೇಕಡ ಏರಿಸಿದೆ ; ಏರಿಸಿರುವುದಕ್ಕೆ ಮಾನದಂಡಗಳೇನು, ಏರಿಕೆಯಿಂದ ಬಿಬಿಎಂಪಿಗೆ ಆಗಿರುವ ಒಟ್ಟು ಹಣದ ಮೊತ್ತವೆಷ್ಟು ; ಇದು ಹಿಂದೆ ಸಂಗ್ರಹವಾಗುತ್ತಿದ್ದ ಹಣಕ್ಕಿಂತ ಎಷ್ಟು ಪಟ್ಟು ಹೆಚ್ಚಾಗಿದೆ ; ಹೆಚ್ಚಾದ ಮೊತ್ತದಿಂದ ಯಾವ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ ; ಕೂಡಲೇ ಇಷ್ಟು ಏರಿಕೆ ಮಾಡಿರುವುದರ ಹಿಂದಿನ ಲೆಕ್ಕಾಚಾರವೇನು ; ಯಾವ ಮಾನದಂಡವನ್ನು ಅನುಸರಿಸಿ ಏರಿಕೆ ಮಾಡಲಾಗಿದೆ ; ಕಸ ವಿಲೇವಾರಿಗೆ ನಿಗದಿತ ಯೋಜನೆಗಳೇನು ;

(ಈ) ಒಣ ಕಸ ವಿಲೇವಾರಿಯನ್ನು ಸರ್ಕಾರವು ಖುದ್ದು ಮಾಡುತ್ತಿದೆಯೇ ; ಅಥವಾ ಯಾವುದಾದರೂ ಏಜೆನ್ಸಿ ಮೂಲಕ ಮಾಡಿಸಲಾಗಿದೆಯೇ ; ಒಣ ಕಸ ವಿಲೇವಾರಿಯಲ್ಲಿ ಪ್ಲಾಸ್ಟಿಕ್, ಗಾಜು ಬಳಸಿದ ಬಾಟಲುಗಳು ಹೇಗೆ ವಿಲೇವಾರಿಯಾಗುತ್ತವೆ ;

(ಉ) ಹಳೆ ಕಟ್ಟಡ ಒಡೆದ ಕಸದ ನಿರ್ವಹಣೆ ಹೇಗಿದೆ ; ಬೆಂಗಳೂರಿನಲ್ಲಿ ಪ್ರತಿ ವರ್ಷ ಹಳೆ ಕಟ್ಟಡಗಳ ನೆಲಸಮ ಕಾರ್ಯ ನಡೆಯುತ್ತಿದೆ ; ಇದಕ್ಕೆ ವಿಧಿಸಿರುವ ಮಾನದಂಡಗಳೇನು ; ಬಾತ್ರೂಮ್ ಟಾಯ್ಲೆಟ್ ಗ್ರಾನೈಟ್ ಟೈಲ್ಸ್ ಹಾಗೂ ಪೋಸ್ಲಿರ್ಂ ವಸ್ತುಗಳ ವಿಲೇವಾರಿ ಕ್ರಮಗಳೇನು ;

(ಊ) ಬೆಂಗಳೂರು ಮಹಾನಗರವನ್ನು ಸುಂದರ ಆಧುನಿಕ ಮಾಡುವ ಹಂತದಲ್ಲಿ ಹಳೆ ಕಟ್ಟಡಗಳ ಕಸ ವಿಲೇವಾರಿಗೆ ಸರ್ಕಾರ ಹಾಕಿಕೊಂಡ ಯೋಜನೆಗಳೇನು ; ಬೆಂಗಳೂರು ಮಹಾನಗರಕ್ಕಾಗಿ ವಿಶೇಷ ಗಮನ ನೀಡಲಾಗಿದೆಯೇ ; ನೀಡಿದ್ದರೆ, ವಿವರವಾದ ಮಾಹಿತಿ ನೀಡಲಾಗುವುದೇ ?

## ಸರ್ಕಾರದ ವಿವಿಧ ಯೋಜನೆಗಳ ಜಾಹೀರಾತುಗಳ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯ (೧೨೩೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಸಾರ್ವಜನಿಕರ ದೈನಂದಿನ ಜೀವನದಲ್ಲಿ ತಲುಪಿಸಲು ಸರ್ಕಾರ ಯಾವ–ಯಾವ ಮಾಧ್ಯಮಗಳು ಹಾಗೂ ಮಾರ್ಗಗಳನ್ನು ಬಳಸುತ್ತಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಆ) ಸರ್ಕಾರ ತನ್ನ ಹಲವು ಕಾರ್ಯಕ್ರಮಗಳ ಯೋಜನೆಗಳ ಪ್ರಚಾರಕ್ಕಾಗಿ ಜಾಹೀರಾತು ನೀಡುವ ಸಂದರ್ಭದಲ್ಲಿ ಯಾವುದೇ ವ್ಯಯ ಮಿತಿ ನಿಗದಿಪಡಿಸಿರುವುದೇ ;

(ಇ) ರಾಜ್ಯದಲ್ಲಿ ಜಾಹೀರಾತು ನೀತಿ advertisement policy ಇದೆಯೇ ; ಇತ್ತೀಚೆಗೆ ಈ ಜಾಹೀರಾತು ನೀತಿಯಲ್ಲಿ ಯಾವುದಾದರೂ ಬದಲಾವಣೆಗಳಾಗಿದೆಯೇ ; ಆಗಿದ್ದಲ್ಲಿ ವಿವರ ಒದಗಿಸುವುದು ;

(ಈ) ಈ ಜಾಹೀರಾತು ನೀತಿಯ ಪ್ರಕಾರ ಸರ್ಕಾರ ನೀಡುವ ಜಾಹೀರಾತುಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮುದ್ರಿತ ಮಾಧ್ಯಮಗಳ ಮೂಲಕ ಸಮುಚಿತವಾಗಿ ವಿತರಣೆ ಮಾಡಲಾಗುತ್ತಿದೆಯೇ ;

(ಉ) ೨೦೨೩–೨೪ ಮತ್ತು ೨೦೨೪–೨೫ ನೇ ಸಾಲಿನಲ್ಲಿ ಪತ್ರಿಕೆಗಳ ಮೂಲಕ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ನೀಡಲಾಗಿರುವ ಜಾಹೀರಾತುಗಳಾವುವು ; (ಪ್ರತ್ಯೇಕ ಪಟ್ಟಿಯನ್ನು ಇಲಾಖಾವಾರು ನೀಡುವುದು)

(ಊ) ಕಳೆದ ಎರಡು ವರ್ಷದಲ್ಲಿ ಈ ಜಾಹೀರಾತುಗಳಲ್ಲಿ ಯಾವುದೇ ಮಾಧ್ಯಮ ಸಂಸ್ಥೆಗೆ ಅನುಚಿತವಾಗಿ ಹೆಚ್ಚಿನ ಪ್ರಮಾಣದ ಹಣ ಬಿಡುಗಡೆ ಆಗಿರುವ ಬಗ್ಗೆ ಯಾವುದಾದರೂ ಆಡಿಟ್ ವರದಿ ಅಥವಾ ಪರಿಶೀಲನೆ ನಡೆದಿದೆಯೇ ? (ನಡೆದಿದ್ದಲ್ಲಿ, ಸಂಪೂರ್ಣ ವಿವರ ಒದಗಿಸುವುದು)

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಇಲ್ಲಿಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೧೦ (೧೧೮೦) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ ಆವರಣದಲ್ಲಿ ಯಾವ ಯಾವ ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸಲಾಗುತ್ತದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಈ ಆವರಣದಲ್ಲಿರುವ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಮಂಜೂರಾದ ಒಟ್ಟು ಹುದ್ದೆಗಳು ಎಷ್ಟು ; ಅವುಗಳಲ್ಲಿ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಹುದ್ದೆಗಳೆಷ್ಟು ;

(ಇ) ಕಾನೂನು ವಿಶ್ವವಿದ್ಯಾಲಯ ಅಡಿ ವಿವಿಧ ನಗರಗಳಲ್ಲಿ ಎಷ್ಟು ಘಟಕ (constituent) ಕಾಲೇಜುಗಳು ನಿರ್ವಹಿಸುತ್ತಿವೆ ; (ಸಂಪೂರ್ಣವಾದ ವಿವರ ನೀಡುವುದು)

(ಈ) ಈ ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಿರುವ ಅಪಿಲೇಟೆಡ್ ಕಾನೂನು ಕಾಲೇಜುಗಳು ಎಷ್ಟು ; ಅವುಗಳಲ್ಲಿ ಮೂರು ವರ್ಷ ಹಾಗೂ ಐದು ವರ್ಷದ ಕೋರ್ಸ್‌ಗಳನ್ನು ನಡೆಸುತ್ತಿರುವ ಕಾಲೇಜುಗಳಾವುವು ; (ವಿವರವಾದ ಮಾಹಿತಿ ನೀಡುವುದು)

(ಉ) ಕರ್ನಾಟಕ ಕಾನೂನು ವಿಶ್ವವಿದ್ಯಾಲಯಕ್ಕೆ ಒಟ್ಟು ಮಂಜೂರಾದ ಬೋಧಕೇತರ ಹುದ್ದೆಗಳು ಎಷ್ಟು ; ಅವುಗಳಲ್ಲಿ ಖಾಯಂ/ಗುತ್ತಿಗೆ ಹಾಗೂ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಊ) ಈ ವಿಶ್ವವಿದ್ಯಾಲಯ ಆವರಣದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ; ಹಾಗೂ ಅವರಿಗೆ ಎಷ್ಟು ವಸತಿ ನಿಲಯಗಳು ಇವೆ ; ಅವುಗಳ ಸಾಮರ್ಥ್ಯ ಎಷ್ಟು ? (ವಿವರವಾದ ಮಾಹಿತಿ ನೀಡುವುದು)

## ವೀಲಿಂಗ್ ಹಾವಳಿ ತಡೆಗಟ್ಟುವ ಬಗ್ಗೆ

**ಡಾ: ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೧ (೧೪೦೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ, ರಾಜಧಾನಿ ಬೆಂಗಳೂರು ಹಾಗೂ ರಾಜ್ಯದ ಇನ್ನಿತರ ನಗರಗಳಲ್ಲಿ ವೀಲಿಂಗ್ ಹಾವಳಿಯಿಂದ ಘಟಿಸಿರುವ ಅಪಘಾತಗಳು ಪ್ರಾಣಹಾನಿ ಸಂಖ್ಯೆ ಎಷ್ಟು ;

(ಆ) ಈ ವೀಲಿಂಗ್ ಹಾವಳಿ ತಡೆಗಟ್ಟಲು ಹಾಗೂ ಬೈಕ್ ಸವಾರರ ರಸ್ತೆ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳೇನು ;

(ಇ) ಇಂತಹ ಪ್ರಕರಣಗಳಲ್ಲಿನ ತಪ್ಪಿತಸ್ಥರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ವಿವರಗಳನ್ನು ಒದಗಿಸುವುದು)

## ಸೈಬರ್ ಕ್ರೈಂಗಳನ್ನು ಹತೋಟಿಯಲ್ಲಿಡಲು ಕೈಗೊಂಡಿರುವ ಕ್ರಮಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೨ (೧೧೫೦) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇಂಟರ್ನೆಟ್ ಮೊಬೈಲ್ ಫೋನ್ ಆನ್‌ಲೈನ್ ಮೂಲಕ ವಂಚನೆಗೊಳಗಾಗುತ್ತಿರುವವರ ಸಂಖ್ಯೆ ಪ್ರತಿದಿನ ಏರಿಕೆ ಆಗುತ್ತಿದ್ದು ಇದಕ್ಕೆ ಅನುಸಾರವಾಗಿ ಸೈಬರ್ ಕ್ರೈಂ ಕೇಸ್ ಗಳನ್ನು ಇತ್ಯರ್ಥಪಡಿಸಲು ಪ್ರತ್ಯೇಕ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ ; ಹಾಗಿದ್ದಲ್ಲಿ , ಎಷ್ಟು ಪೊಲೀಸ್ ಠಾಣೆಗಳನ್ನು ಮತ್ತು ಸಿಬ್ಬಂದಿಗಳನ್ನು ನೇಮಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಇಂಟರ್ನೆಟ್ ಮೊಬೈಲ್ ಫೋನ್ ಆನ್‌ಲೈನ್ ಬಳಸಿ ವಂಚನೆ ಮಾಡುವ (ಸೈಬರ್ ಕ್ರೈಂ) ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ; ಈ ಪೈಕಿ ಎಷ್ಟು ಪ್ರಕರಣಗಳಿಗೆ ಕೇಸ್ ದಾಖಲಿಸಲಾಗಿದೆ ; ಎಷ್ಟು ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ ; ಈ ಮೂಲಕ ಎಷ್ಟು ಹಣ ವಂಚಿಸಲಾಗಿದೆ ; (ವರ್ಷವಾರು ವಿವರ ನೀಡುವುದು)

(ಇ) ಸೈಬರ್ ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಸಿಬ್ಬಂದಿಗಳಿಗೆ ಬೇಕಾದ ಆಧುನಿಕ ತಂತ್ರಜ್ಞಾನದ ಪರಿಕರಗಳು ಮತ್ತು ತರಬೇತಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ , ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು )

## ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಗೆ ತಂದಿರುವ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೩ (೧೧೧೭) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ೨೦೨೪ ಅನ್ನು ಜಾರಿಗೆ ತರಲಾಗಿದೆಯೇ ; ಹಾಗಿದ್ದಲ್ಲಿ, ಸರ್ಕಾರದ ಅಧಿಸೂಚನೆ/ಆದೇಶದ ಪ್ರತಿಯೊಂದಿಗೆ ಹಾಗೂ ಪ್ರದೇಶವಾರು ಮ್ಯಾಪ್‌ನ (ನಕ್ಷೆ) ಪ್ರತಿಯೊಂದಿಗೆ ಮಾಹಿತಿ ಒದಗಿಸುವುದು ;

(ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಎಷ್ಟು ನಗರ ಪಾಲಿಕೆಗಳಾಗಿ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ ; (ನಿರ್ದಿಷ್ಟಪಡಿಸಿದ ಗಡಿಗಳ ವಿವರಗಳನ್ನು ಮ್ಯಾಪ್‌ನೊಂದಿಗೆ (ನಕ್ಷೆ) ವಿವರಣೆ ನೀಡುವುದು)

(ಇ) ವಿಭಜಿಸಿದ ನಗರ ಪಾಲಿಕೆಗಳಲ್ಲಿ ಬರುವ ವಾರ್ಡ್‌ಗಳ ಸಂಪೂರ್ಣವಾಗಿ ಆಯಾ ವಿಧಾನಸಭಾ ಕ್ಷೇತ್ರದೊಳಗಡೆಯೆ ಬರಲಿವೆಯೇ ; (ವಿವರಣೆ ನೀಡುವುದು)

(ಈ) ವಿಭಜಿಸಿದ ನಗರಪಾಲಿಕೆ ವ್ಯಾಪ್ತಿಗೆ ಬರುವ ಮತ್ತು ಆಯಾ ವಿಧಾನಸಭಾ ಕ್ಷೇತ್ರದೊಳಗೆ ಬರುವ ವಾರ್ಡ್‌ಗಳ ಹೆಸರುಗಳಾವುವು ? (ಹೆಸರುಗಳ ಪಟ್ಟಿಯನ್ನು ಒದಗಿಸುವುದು)

## ನಾರಾಯಣ ಗುರು ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೪ (೧೨೫೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈಡಿಗ ಸಮುದಾಯದ ಏಳಿಗೆಗೆ ನಾರಾಯಣ ಗುರು ಅಭಿವೃದ್ಧಿ ನಿಗಮ ಸ್ಥಾಪನೆಗೆ ಸರ್ಕಾರ ಆಶ್ವಾಸನೆಯನ್ನು ನೀಡಿರುವುದು ನಿಜವೇ ;

(ಆ) ನೀಡಿದ್ದಲ್ಲಿ, ಸ್ಥಾಪನೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ನಾರಾಯಣ ಗುರು ನಿಗಮಕ್ಕೆ ಸರ್ಕಾರ ನಿಗದಿಪಡಿಸಿದ ಅನುದಾನವೆಷ್ಟು ಹಾಗೂ ಬಿಡುಗಡೆಯಾದ ಅನುದಾನವೆಷ್ಟು ; ಉಳಿದ ಅನುದಾನವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು ?

## ಭೂ ಸ್ವಾಧೀನ ಪ್ರಕರಣಗಳಲ್ಲಿ SLP ದಾಖಲಿಸಲು ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೫ (೧೧೪೧) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ವಿವಿಧ ಇಲಾಖೆಗಳು ಭೂಸ್ವಾಧೀನ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡುವ ಸಂಬಂಧ ಒಟ್ಟು ಎಷ್ಟು ದಾವೆಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇವೆ ; (ಇಲಾಖಾವಾರು ಮತ್ತು ನ್ಯಾಯಾಲಯವಾರು ಮಾಹಿತಿ ನೀಡುವುದು)

(ಆ) ವಿವಿಧ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ವಜಾಗೊಂಡಿದೆ ; ಸದರಿ ಅರ್ಜಿಗಳನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ ಪ್ರಕರಣಗಳು ಎಷ್ಟು ; ಮತ್ತು ೧೨೦ ದಿನಗಳ ನಂತರ ಮೇಲ್ಮನವಿ ಸಲ್ಲಿಸಿದ ಪ್ರಕರಣಗಳೆಷ್ಟು ; (ಇಲಾಖಾವಾರು ಮತ್ತು ಪ್ರಕರಣವಾರು ಮಾಹಿತಿ ನೀಡುವುದು)

(ಇ) ಭೂ ಪರಿಹಾರ ನೀಡುವ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ; (ಪ್ರಕರಣವಾರು ಮಾಹಿತಿ ನೀಡುವುದು)

(ಈ) ಮೇಲ್ಮನವಿ ಸಲ್ಲಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು ; ಈ ವಿಳಂಬ ಧೋರಣೆಯಿಂದ ಸರ್ಕಾರದ ಬೊಕ್ಕಸಕ್ಕೆ ಆದ ಆರ್ಥಿಕ ಹೊರೆ ಎಷ್ಟು ; ಹಾಗೂ ವಿಳಂಬಕ್ಕೆ ಕಾರಣರಾದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಮಾದಕ ವಸ್ತುಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬ (೧೧೨೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅತೀ ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತುಗಳು ಪತ್ತೆಯಾಗುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು ; ಕಳೆದ ಎರಡು ವರ್ಷಗಳಲ್ಲಿ ಡ್ರಗ್ಸ್ ಕುರಿತು ಎಷ್ಟು ಪ್ರಕರಣಗಳು ದಾಖಲಾಗಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ಮುಂಬೈ ಪೋಲಿಸರು ಪತ್ತೆ ಮಾಡಿದ್ದು, ಇದು ಸ್ಥಳೀಯ ಪೋಲಿಸ್ ನಿರ್ಲಕ್ಷತೆಗೆ ಸಾಕ್ಷ್ಯ ಎಂಬುದರ ಬಗ್ಗೆ ಸರ್ಕಾರದ ನಿಲುವೇನು ; ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿದ ಎಷ್ಟು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ ; (ಹೆಸರಿನೊಂದಿಗೆ ವಿವರ ನೀಡುವುದು)

(ಇ) ಸರ್ಕಾರವು ಡ್ರಗ್ಸ್ ಮಾರಾಟಗಾರರಿಗೆ ಪ್ರೋತ್ಸಾಹ ನೀಡುತ್ತಿದೆಯೇ; ಅಥವಾ ಪೋಲಿಸ್ ಇಲಾಖೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೆ; ಈ ಕುರಿತು ಸರ್ಕಾರದ ನಿಲುವೇನು;

(ಈ) ಕಳೆದ ೩ ವರ್ಷಗಳಲ್ಲಿ ಪೋಲಿಸರು ದಾಖಲಿಸಿದ ಡ್ರಗ್ಸ್ ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಯಾಗುತ್ತಿರುವುದಕ್ಕೆ ಕಾರಣಗಳೇನು; ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಪ್ರಕರಣಗಳ ಖುಲಾಸೆಗೆ ಸಹಕರಿಸುತ್ತಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಕಳೆದ ಎರಡು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಗೊಂಡಿವೆ? (ಪ್ರಕರಣಗಳವಾರು ವಿವರ ನೀಡುವುದು)

## ಹಾಸನ ಜಿಲ್ಲೆಯ ಹೇಮಾವತಿ ಮತ್ತು ಯಗಚಿ ನದಿಹರಿವುಗಳಲ್ಲಿನ ಗ್ರಾಮಗಳ ಕುರಿತು

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೧೭ (೧೨೩೬) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಮತ್ತು ಯಗಚಿ ನದಿಹರಿವುಗಳಲ್ಲಿ ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವ ಗ್ರಾಮಗಳು ಯಾವುವು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಶೀತಪೀಡಿತವಾಗಿಲ್ಲವೆಂದು ಘೋಷಿಸಲ್ಪಟ್ಟಿರುವ ಗ್ರಾಮಗಳಲ್ಲಿ ಶೀತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿದೆ; (ಈ ಕುರಿತು ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಗ್ರಾಮವನ್ನು ಶೀತಪೀಡಿತವಾಗಿರುವುದಿಲ್ಲವೆಂದು ಸರ್ಕಾರವೇ ಘೋಷಿಸಿರುವುದು ನಿಜವೇ ; ಇದ್ದಲ್ಲಿ, ವಿವರಿಸುವುದು ;

(ಈ) ಸರ್ಕಾರದ ಆದೇಶದನ್ವಯ ಸದರಿ ಗ್ರಾಮವು ಶೀತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ; ಮಾಡಿದ್ದಲ್ಲಿ, ಅಭಿವೃದ್ಧಿ ಕಾರ್ಯಗಳ ಮತ್ತು ಪೂರ್ಣಗೊಂಡ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು ;

(ಉ) ಪ್ರಸ್ತುತ ಬಾಕಿಯಿರುವ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರವು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಸಿ.ಎಲ್. ೭ ಗಳ ಮಾಹಿತಿ ನೀಡುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೧೮ (೧೧೭೮) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇಲ್ಲಿಯವರೆಗೂ ನೀಡಿರುವ ಸಿ.ಎಲ್. ೭ ಗಳ ಸಂಖ್ಯೆ ಎಷ್ಟು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಬಾರ್ ಗಳಿಗೆ ದೇವರ ಹೆಸರನ್ನು ಇಟ್ಟಿರುವುದರಿಂದ ಯಾವುದಾದರೂ ಆಕ್ಷೇಪಣೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ; ಇಲ್ಲದಿದ್ದಲ್ಲಿ, ಈ ರೀತಿ ದೇವರ ಹೆಸರನ್ನು ಇಟ್ಟಿರುವ ಬಾರ್ ಗಳಿಗೆ ಹೆಸರನ್ನು ತೆರವುಗೊಳಿಸುವಂತೆ ಸರ್ಕಾರವು ಯಾವ ಕಾಲಮಿತಿಯೊಳಗೆ ಆದೇಶವನ್ನು ನೀಡುವುದು ; (ಪೂರ್ಣವಾದ ಮಾಹಿತಿ ನೀಡುವುದು)

(ಇ) ಬಾರ್ ಗಳಲ್ಲಿ ಸಾಮಾನ್ಯವಾಗಿ ಮದ್ಯಕ್ಕೆ ಹೆಚ್ಚು ಬೆಲೆ ಇದ್ದು, ಇನ್ನೂ ಹೆಚ್ಚು ಬೆಲೆಗೆ ಮದ್ಯವನ್ನು ಮಾರುತ್ತಿರುವವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ರಾತ್ರಿ ಬಾರ್ ಮುಚ್ಚಲು ಸಮಯವನ್ನು ನಿಗದಿಪಡಿಸಲಾಗಿದೆಯೇ ; ಬೆಂಗಳೂರಿನ ಕೆಲವು ಬಾರ್‌ಗಳಲ್ಲಿ ಹಾಗೂ ಇನ್ನಿತರ ಕೆಲವು ಜಿಲ್ಲೆಗಳಲ್ಲಿ ರಾತ್ರಿ ವೇಳೆ ಬಾರ್ ಮುಚ್ಚಲು ಸರ್ಕಾರದ ಯಾವುದೇ ನಿಯಮವನ್ನು ಪಾಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ , ಸಂಬಂಧಪಟ್ಟವರ ಮೇಲೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಹುಬ್ಬಳ್ಳಿ ಮತ್ತು ಬೆಳಗಾವಿಗಳಲ್ಲಿರುವ ಕ್ರಿಕೆಟ್ ಸ್ಟೇಡಿಯಂಗಳನ್ನು ಸರಿಯಾಗಿ ನಿರ್ವಹಿಸದೇ ಇರುವ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೯೯ (೧೧೭೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ ಬೆಳಗಾವಿ ಜಿಲ್ಲೆಗಳಲ್ಲಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗಳಲ್ಲಿ ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಸ್ಟೇಡಿಯಂಗಳನ್ನು ಸರಿಯಾದ ನಿರ್ವಹಣೆ ಮಾಡದೇ ನಿರ್ಲಕ್ಷಿಸುತ್ತಿರುವುದಕ್ಕೆ ಕಾರಣವೇನು ;

(ಇ) ಸದರಿ ಜಿಲ್ಲೆಗಳಲ್ಲಿರುವ ಸ್ಟೇಡಿಯಂಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿ ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪಂದ್ಯಾವಳಿಗಳನ್ನು ಆಯೋಜಿಸಿ ಉತ್ತರ ಕರ್ನಾಟಕ ಭಾಗದ ಯುವ ಗ್ರಾಮೀಣ ಕ್ರೀಡಾಪಟುಗಳನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

# ಕೃಷ್ಣ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೨೦ (೧೧೯೨) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಇನ್ನೂ ಭೂಸ್ವಾಧೀನ ಪಡಿಸಿಕೊಳ್ಳಬೇಕಾದ ಜಮೀನಿನ ಕ್ಷೇತ್ರ ಎಷ್ಟು ; ಹಳ್ಳಿ, ಪಟ್ಟಣಗಳಾವುವು ; ಅವುಗಳ ಕಟ್ಟಡಗಳು ಎಷ್ಟು ; (ತಾಲ್ಲೂಕುವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಎಕರೆವಾರು ನೀರಾವರಿ, ಖುಷ್ಕಿ ಜಮೀನುಗಳ ಸದ್ಯದ ಭೂ ಪರಿಹಾರ ದರವನ್ನು ನಿಗದಿಪಡಿಸಲಾಗಿದೆಯೇ ; (ವಿವರ ನೀಡುವುದು)

(ಇ) ಈ ಯೋಜನೆ ಪೂರ್ಣಗೊಳ್ಳಲು ಸರ್ಕಾರ ಅಂದಾಜಿಸಿದ ಒಟ್ಟು ಮೊತ್ತ ಎಷ್ಟು ; ಭೂಸ್ವಾಧೀನ, ಪುನರ್ವಸತಿ ಮತ್ತು ಅಗತ್ಯ ಕಾಲುವೆಗಳ ನಿರ್ಮಾಣ ಇವುಗಳಿಗೆ ತಗಲುವ ವೆಚ್ಚ ಎಷ್ಟು ; (ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)

(ಈ) ಭೂ ಸ್ವಾಧೀನ ಕುರಿತಂತೆ ನ್ಯಾಯಾಲಯಗಳಲ್ಲಿ ಹೆಚ್ಚುವರಿ ಪರಿಹಾರ ಕೋರಿ ಬಾಕಿ ಇರುವ ಪ್ರಕರಣಗಳೆಷ್ಟು ; ಅವುಗಳಲ್ಲಿ ಒಳಗೊಂಡಿರುವ ಕ್ಷೇತ್ರವೆಷ್ಟು ; ಈ ಪ್ರಕರಣಗಳಲ್ಲಿ ಹೆಚ್ಚುವರಿ ಪರಿಹಾರ ನೀಡಬೇಕಾದ ಸದ್ಯ ಅಂದಾಜಿಸಿದ ಮೊತ್ತವೆಷ್ಟು ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ–291, 500 ಪ್ರತಿಗಳು (ಪಿ6)

**List of Questions**
**for Oral Answers**

**Total No. of**
**Questions - 15**

# LIST - 08

# KARNATAKA LEGISLATIVE COUNCIL

## ONE HUNDRED AND FIFTY SIXTH SESSION

## Thursday, the 21st August, 2025

---

**GROUP - IV**

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology.

---

### INJUSTICE FOR THE CANDIDATES OF KALYANA KARNATAKA REGION

**Sri Shashil G.Namoshi (Teachers' Constituency) -**

106 (1218) Will the Chief Minister be pleased to state:-

a) whether it has come to the notice of the Government that the injustice is occurring for the candidates of Kalyana Karnataka Region by making recruitment arbitrarily according to the various rules without recruiting as per the circulars of the Government with regard to recruitment of 371 (J) by the recruitment authorities of the State like KPSC, KEA, KSP and others ;

if so, the step taken by the Government to setright the same ;

b) the KPSC is making recruitment by issuing recruitment notification separately for the posts of Kalyana Karnataka and residual parent cadre, but the Karnataka Examination Authority is making recruitments by issuing mere single notification without issuing recruitment notification separately for the posts of Kalyana Karnataka and residual parent cadre, whether it has come to the notice of the Government ;

c) the action taken by the department against the officers who have violated the rules in this regard ; (details be furnished)

d) there is an injustice has been caused for the candidates of Kalyana Karnataka Region in the recruitments of all posts that have been recruited already by all these recruitment authorities, whether it has come to the notice of the Government that the cases have been lodged in the court for the recruitment processes of different posts of various departments in this regard ; if so, the manner in which the steps have been taken and would be taken by the Government ;

e) the steps that would be taken by the department for the recruitment by cancelling the recruitments process which have been completed already and which are under process at present by all these recruitment authorities since it a serious issue; if not, whether it will create the space for approaching the court ? (an appropriate stand of the Government in this regard be furnished)

**REGARDING DEVELOPMENT OF LAKES**

**Smt. Balkhees Banu (Elected by Legislative Assembly) -**

107 (1139) Will the Minister for Minor Irrigation, Science and Technology be pleased to state:-

a) the number of lakes and ponds which are coming in the limit of Zilla Panchayat and Irrigation Department in the State ; (districtwise details be furnished)

b) the steps taken for the development of lakes in Shivamogga district during the last three years ; (talukwise information be furnished)

c) the number of lakes that have been developed in Shivamogga district during the last three years ; (details be furnished)

d) the number of lakes and ponds that have lost their original form in Shivamogga district ? (talukwise details be furnished)

**REGARDING CLEANLINESS AND DISPOSAL OF WASTE IN BENGALURU CITY**

**Sri Keshava Prasad S. (Elected by Legislative Assembly) -**

108 (1234+1292) Will the Deputy Chief Minister be pleased to state:-

a) whether it is true that Bengaluru metropolitan city has secured 36$^{th}$ rank in our Country regarding the maintenance of cleanliness; the reasons for our Bengaluru lagging behind the cleanliness eventhough it is famous for the city of gardens, land of lakes, pensioners paradise and silicon valley ;

b) the reason for the works that have been taken up by the Government have been failed to achieve the progress in the disposal of wet waste and dry waste ; several times the waste reaches a state of bad smell by decaying after using composer it became hygienic, the solutions therefor ; the reasons for not contemplating regarding disposal of waste ;

c) the percentage of amount that has been hiked by the Government for the collection of waste ; the criterias for the same ; the total amount that has been accrued to B.B.M.P from the same ; the increase in the quantum of amount collected before hike ; the details of the works that have been taken up from the enhanced amount ; the details of calculations regarding the immediate enhancement of the same ; the criteria complied with regarding the enhancement of the same ; the prescribed plans for disposal of waste ;

d) whether the disposal of waste is being carried out by the Government itself ; or whether the same has been carried out through any agency ; the manner in which the plastic, glass and used bottles would be disposed in the disposal of dry waste ;

e) the maintenance of waste in the demolition of old building; the demolition work of old building is being carried out every year in Bengaluru, the criterias that have been prescribed for the same ; the disposal measures of bathroom toilet, granite tiles and procelian items ;

f) the plans chalked out by the Government for the disposal of waste of old buildings in the phase to make modern Bengaluru metropolitan city and beautiful ; whether the special attention has been given for Bengaluru metropolitan city ; if so, whether the detailed information would be provided ?

## ADVERTISEMENT OF VARIOUS SCHEMES OF GOVERNMENT

**Sri D.S.Arun (Local Authorities Constituency) -**

109 (1239) Will the Chief Minister be pleased to state:-

a) the particulars of medias and channels that are being used by the Government to accomplish the various schemes and programmes of the Government to the day to day life of public ; (complete details be furnished)

b) whether any expenditure limit has fixed by the Government in the circumstance of advertising for the publication of its various programmes and schemes ;

c) whether there is an advertisement policy in the State ; whether any changes has been made in this advertisement policy recently; if so, details be furnished ;

d) whether the advertisements of the Government is being distributed properly through the print medias in all the districts of the State according to this advertisement policy ;

e) the particulars of advertisements that have been published through newspapers and electronic medias during the year 2023-24 and 2024-25 ; (departmentwise separate list be furnished)

f) whether any audit report and verification has been carried out with regard to excess amount being released improperly to any media group in these advertisements during the last two years ? (if so, complete details be furnished)

## TEACHING AND NON TEACHING STAFF IN KARNATAKA STATE LAW UNIVERSITY, HUBBALLI

**Sri S.V.Sankanur (Graduates' Constituency) -**

110 (1180) Will the Minister for Law, Parliamentary Affairs and Legislation and Tourism be pleased to state:-

a) the particulars of graduation and post graduation courses that would be conducted in the campus of Karnataka State Law University, Navanagar, Hubballi ; (complete information be furnished)

b) the total number of posts that have been sanctioned for graduation and post graduation courses in this campus ; out of which, the number posts which are working on permanent and contract basis ;

c) the number of constituent colleges which are functioning in various cities under the Law University ; (complete details be furnished)

d) the number of affiliated law colleges to this University ; out of which, the particulars of colleges which are conducting three year and five year courses ; (detailed information be furnished)

e) the total number of sanctioned non teaching posts for Karnataka Law University ; out of which, the number of staff who are working on permanent/contract basis and through agency ;

f) the number of male and female students who have been enrolled for graduation and post graduation courses in this University campus ; the number of hostels which are there ; the details of the strength thereof ? (detailed information be furnished)

**REGARDING CURB OF WHEELING MENACE**

**Dr.K. Govindaraj (Elected by Legislative Assembly) -**

111 (1403) Will the Minister for Home be pleased to state:-

a) the number of accidents and fatalities that have been occurred due to wheeling in the Capital City of Bengaluru and other cities of the State during the last three years ;

b) the steps taken to curb the menace of this wheeling and the road safety of bike riders ;

c) the details of the actions taken against the culprits in such cases ? (details be furnished)

## MEASURES TAKEN TO CONTROL CYBERCRIMES

**Sri S. Ravi (Local Authorities Constituency) -**

112 (1150) Will the Minister for Home be pleased to state:-

a) since the number of victims are being increasing everyday by fradulence through internet, mobile phone and online in the State, whether separate personnel have been appointed to set right the cybercrime cases accordingly ; if so, the number of police stations and personnel who have been appointed ; (complete details be furnished)

b) the number of fraudulent cases (cybercrime) that have came to light by using internet, mobile phone and online during the last three years ; out of which, the number of cases for which the complaint has been lodged ; the number of cases that have been settled ; the fraudulent amount through the same ; (yearwise details be furnished)

c) whether it has come to the notice of the Government that there is shortage of required modern technological equipments and training for the personnel to set right the cybercrime cases ; if so, the steps taken to resolve the same ? (details be furnished)

## IMPLEMENTATION OF GREATER BENGALURU GOVERNANCE ACT, 2024

**Sri T.N.Javarayi Gowda (Elected by Legislative Assembly) -**

113 (1117) Will the Deputy Chief Minister be pleased to state:-

a) whether the Greater Bengaluru Governance Act, 2024 has been implemented ; if so, the information alongwith the copy of the Government Notification /Order and areawise map be furnished ;

b) the details of the proposal that has been made for the establishment of intended number of City Municipal Councils by the Bruhat Bengaluru Mahanagara Palike ; (the details of specified boundaries alongwith map be furnished)

c) whether the wards which are coming under the bifurcated city municipal councils would come within the jurisdiction of respective assembly constituency completely ; (details be furnished)

d) the particulars of names of wards which are coming within the limits of bifurcated City Municipal Councils and respective assembly constituency ? (list of names be furnished)

**ESTABLISHMENT OF NARAYANA GURU DEVELOPMENT CORPORATION**

**Sri Jagadev Guttedar (Elected by Legislative Assembly) -**

114 (1255) Will the Chief Minister be pleased to state:-

a) whether it is true that the assurance has been given by the Government for the establishment of Narayana Guru Development Corporation for the welfare of Idiga community ;

b) if so, the step taken by the Government to establish the same ;

c) the grant that has been earmarked by t he Government to Narayana Guru Corporation and the grant that has been released ; the date on which the outstanding grant would be released ?

**DELAYING TO FILE S.L.P IN LAND ACQUISITION CASES**

**Sri Sharavana T.A. (Elected by Legislative Assembly) -**

115 (1141) Will the Minister For Law, Parliamentary Affairs and Legislation and Tourism for be pleased to state:-

a) the total number of cases which are pending in various courts with regard to providing compensation to victims in land acquisition cases in the various departments of the Government ; (departmentwise and courtwise information be furnished)

b) the number of cases that have been dismissed in various courts ; the number of cases in which the appeal has been filed by challenging the said applications ; and the number of cases in which the appeal has been filed after 120 days ; (departmentwise and casewise information be furnished)

c) whether it has come to the notice of the Government that delay is being occurred to file an appeal in the cases of providing land compensation ; if so, the steps taken by the Government ; (casewise information be furnished)

d) the reasons for the delay to file an appeal; the financial burden that has been occurred to the exchequer of the Government due to this delay ; and the action taken by the Government against the persons who are responsible for the delay?

**REGARDING NARCOTIC DRUGS**

**Sri N.Ravikumar (Elected by Legislative Assembly) -**

116 (1125) Will the Minister for Home be pleased to state:-

a) the narcotic drugs are being detected in very large quantity in the State, the stand of the Government in this regard ; the number of cases that have been lodged with regard to the drugs during the last two years ; (districtwise information be furnished)

b) the drug factory is being detected by the Mumbai police at Mysuru, the stand of the Government regarding that it is the evidence of negligence by the local police ; the

number of officers who have been suspended due to negligence in their duty ; (the details alongwith name be furnished)

c) whether the encouragement is being provided for drug peddlers by the Government ; or whether the police department is not functioning properly, the stand of the Government in this regard ;

d) the reasons for the drug cases that have been lodged by the police during the last 3 years is being acquitted in the court ; details of the action taken on the officers who are co-operating for acquittal of cases without providing supporting records to the court ; the number of cases that have been acquitted in the court during the last two years ? (casewise details be furnished)

**REGARDING VILLAGES IN HEMAVATI AND YAGACHI RIVER BASINS OF HASSAN DISTRICT**

**Sri Suraj Revanna (Local Authorities Constituency) -**

117 (1236) Will the Deputy Chief Minister be pleased to state:-

a) the particulars of villages in the area where the Hemavati and Yagachi rivers are flowing in the limit of Hassan district that have been declared as non coldest prone area ; (talukwise information be furnished)

b) the particulars of development works that have been taken up by the Government with regard to preventing the cold in the villages that have been declared as non coldest prone areas ; (the complete information in this regard be furnished)

c) whether it is true that Anekere village in Channarayapatna taluk of Hassan district has been declared as non coldest prone area by the Government itself ; if so, the explanation be furnished ;

d) the grant that has been released to execute the development works in view to prevent the cold in the said village as per the order of the Government ; if so, the complete information of development works and completed works be furnished ;

e) the timelimit within which pending development works would be completed by the Government ? (complete information be furnished)

**PROVIDING INFORMATION OF C.L.7 LICENCES**

**Sri M.L.Anil Kumar (Local Authorities Constituency) -**

118 (1178) Will the Minister for Excise be pleased to state:-

a) the number of C.L.7 Licences that have been issued in the State so far ; (complete information be furnished)

b) whether any objection has been received due to the keeping of gods names for bars ; if so, the step taken in this regard ; if not, the timelimit within which the order would be issued by the Government to remove the name for the bars that have kept the name of gods in this manner ; (complete information be furnished)

c) generally the price of liquor is higher in the bars, the action taken by the Government against the persons who are selling the liquor higher price than prescribed price ;

d) whether the time has been fixed for closing of the bars at night ; whether it has come to the notice of the Government that some bars in Bengaluru and some other districts have not complied any rules of the Government for closing of the bars at night ; if so, the action taken against the concerned persons? (complete information be furnished)

## IMPROPER MAINTENANCE OF CRICKET STADIUMS IN HUBBALLI AND BELAGAVI

**Sri Pradeep Shettar (Local Authorities Constituency) -**

119 (1176) Will the Chief Minister be pleased to state:-

a) whether it has come to the notice of the Government that the cricket tournaments are not being organised in the International Cricket Stadiums which have been located in Hubballi and Belagavi ;

b) the reason for neglecting the stadiums without proper maintenance ;

c) the steps taken by the Government to encourage the young rural athletes of North Karnataka Region by organizing the national and international tournaments in upcoming days by maintaining the stadiums in the said districts in proper manner ?

## COMPLETION OF UPPER KRISHNA PROJECT

**Sri P.H.Pujar (Local Authorities Constituency) -**

120 (1192) Will the Deputy Chief Minister be pleased to state:-

a) the extent of land yet to be acquired to complete the Upper Krishna Project ; the particulars of villages and towns thereof ; the number of buildings thereof ; (talukwise and districtwise information be furnished)

b) whether acrewise irrigation and dry land compensation rate has been fixed with regard to land acquisition ; (details be furnished)

c) the total amount that has been estimated by the Government to complete this project ; the amount of cost to be incurred for the land acquisition, rehabilitation

and construction of necessary canals ; (separate information be furnished)

d) the number of cases are pending in the courts for seeking additional compensation with regard to land acquisition ; out of which, the extent of land thereof ; the current estimated amount that has to be provided as additional compensation in these cases ? (details be furnished)

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-/P5